# ಜಾತಿ ಭಾರತ

ಇಂದು ಭಾರತೀಯನೊಬ್ಬ ಇನ್ನೊಬ್ಬ ಭಾರತೀಯನನ್ನು ಭೇಟಿಯಾದಾಗ, ಭೇಟಿಯಾದವನ ಜಾತಿಮೂಲವನ್ನು ಹುಡುಕುವ ಕ್ರಿಯೆಗೆ ತೊಡಗುತ್ತಾನೆ. ಭೇಟಿಗೆ ಮೊದಲೇ ಆ ವ್ಯಕ್ತಿಯ ಜಾತಿಮೂಲವನ್ನು ಪತ್ತೆಹಚ್ಚುವ ಪ್ರಯತ್ನ ಮಾಡಿರುತ್ತಾನೆ ಅಥವಾ ಭೇಟಿಯಾದ ಸಂದರ್ಭದಲ್ಲಿ ವ್ಯಕ್ತಿಯ ಭಾಷೆ, ನಯಗಾರಿಕೆ, ಉಡುಪು ಹಾಗೂ ದೈಹಿಕ ವರ್ತನೆಗಳ ಮೂಲಕ ಜಾತಿಗುರುತಿಸಲು ತೊಡಗುತ್ತಾನೆ. ಇದೊಂದು ವಾಸನೆಯ ರೋಗ! ಜಾತಿಮೂಲ ಹುಡುಕುವ ಈ ಗುಣ ವಾಸನೆಯಿಂದಲೇ ಆಹಾರಮೂಲ ಕಂಡುಹಿಡಿಯುವ ಬೇಟೆನಾಯಿಯ ರೀತಿಯದು. ಆದುದರಿಂದಲೇ ಭಾರತವನ್ನು 'ಜಾತಿಭಾರತ'ವೆಂದು ಕರೆಯಬಹುದು. ಈ ಜಾತಿಭಾರತವನ್ನು ತನ್ನ ರಕ್ತಕ್ಕೆ ಅಂಟಿರುವ ಜಾತಿವಾಸನೆಯಿಂದ ವಿಮುಕ್ತಗೊಳಿಸಿ 'ಮನುಷ್ಯಭಾರತ'ವನ್ನಾಗಿ ರೂಪಿಸಲು ಬಸವ, ಬುದ್ಧ, ಗಾಂಧಿ, ಲೋಹಿಯ, ಅಂಬೇಡ್ಕರ್ ಅಂಥವರು ನೀಡಿದ ಚಿಂತನೆ ಇಂದಿಗೂ ಭಾರತೀಯ ಬದುಕಿನಲ್ಲಿ ಕೇವಲ ಆದರ್ಶವಾಗುಳಿದಿರುವುದು ವಿಷಾದಕರ ಹಾಗೂ ದುರಂತ.

ಭಾರತೀಯ ವರ್ಣಾಶ್ರಮಧರ್ಮದ ಮಕ್ಕಳಾದ ಈ ಜಾತಿಗಳು ಒಡೆದು ಸೀಳಿ ಹೋಳುಗಳಾಗಿ ಸಾವಿರಾರು ಜಾತಿಗಳಾಗಿ ಗುರುತಿಸಿಕೊಳ್ಳುತ್ತಿವೆ. ಪ್ರತಿಜಾತಿಯಲ್ಲೂ ಅನೇಕ ಉಪಜಾತಿಗಳು ಉದ್ಭವಿಸಿ, ಮೇಲ್ನೋಟಕ್ಕೆ ಒಂದು ಸಮುದಾಯದಂತೆ ಕಂಡರೂ ಒಳಗೊಳಗೆ ಗುಂಪುಗಳಾಗಿ, ವರ್ತುಲಗಳಾಗಿ ಅವರವರಲ್ಲೇ ಅನುಮಾನ ಅಸೂಯೆಗಳಿಂದ ಬದುಕು ಮಾಡುತ್ತಿರುವುದನ್ನು ಕಾಣಬಹುದು. ಹಕ್ಕುಗಳಾಗಿ ಸಮುದಾಯವಾಗಿ ಹೋರಾಡಿದರೂ ಬಂದ ಲಾಭವನ್ನು ಹಂಚಿಕೊಳ್ಳುವುದರಲ್ಲಿ ಉಪಜಾತಿಯ ಆಧಾರದ ಮೇಲೆ ತಾರತಮ್ಯ ಭಾವವನ್ನು ಅಭಿವ್ಯಕ್ತಿಸುತ್ತವೆ. ಈ ತಾರತಮ್ಯ ಭಾವವು ಕೆಲವೊಮ್ಮೆ ಮುಗುಮ್ಮಾಗಿ ನಡೆದರೆ, ಮತ್ತೆ ಕೆಲವೊಮ್ಮೆ ಕಾದಾಟದಲ್ಲೂ ಗೋಚರಿಸಬಹುದು. ಈ ಜಾತಿಭಾವವು ನಮ್ಮ ಭಾರತದ ಆಡಳಿತಾಂಗ–ನ್ಯಾಯಾಂಗವನ್ನು ಪ್ರವೇಶಮಾಡಿ ಸ್ವಜನಪಕ್ಷಪಾತಕ್ಕೆ ಎಡೆಮಾಡಿಕೊಟ್ಟಿದೆ. ಜಾತಿಮುಕ್ತ ಭಾರತವನ್ನಾಗಿ ಮಾಡುವುದರ ಬದಲು ನಮ್ಮ ರಾಜಕೀಯ ವ್ಯವಸ್ಥೆ ಅದನ್ನು ಮತ್ತಷ್ಟು ಗಟ್ಟಿಗೊಳಿಸುವ ಕಡೆ ಜನರ ಮನಸ್ಸನ್ನು ಕಲುಷಿತಗೊಳಿಸುತ್ತಿದೆ. ಉದಾರವಾಗಿದ್ದ ಭಾರತೀಯ ಗ್ರಾಮೀಣ ಸಂಸ್ಕೃತಿಯು ಇಂದು ಸ್ಪಷ್ಟವಾಗಿ 'ಜಾತಿಕೇರಿ'ಗಳಾಗಿ ಒಡೆದುಹೋಗಿ, ಒಬ್ಬರನ್ನೊಬ್ಬರನ್ನು ತುಳಿದು ಬದುಕು ಮಾಡುವ ವ್ಯವಸ್ಥೆಯಾಗಿ ಮಾರ್ಪಡುತ್ತಿದೆ.

ಭಾರತೀಯ ತಿನ್ನುವ ಆಹಾರ, ಅವನ ಭಾಷೆಯ ತಳಕುಬಳಕುವಿಕೆ, ಉಡುಪು, ಮುಖ್ಯವಾಗಿ ಅವನು ತಲತಲಾಂತರದಿಂದ ಮಾಡುತ್ತಾ ಬಂದಿರುವ ವೃತ್ತಿ–ಇವು ಅವನ ರಕ್ತದಲ್ಲಿ ಬೆರೆತುಹೋಗಿ ಅವನಲ್ಲಿ ನಿರ್ದಿಷ್ಟವಾದ ಜಾತಿಕೂಪದ ಆವರಣದ ಮನೋನೆಲೆಯನ್ನು ರೂಪಿಸುತ್ತವೆ. ಅವನು ಮಾಡುವ ವೃತ್ತಿಗೂ ಅವನ ಸ್ವಚ್ಛತೆಗೂ ಸಂಬಂಧವಿರುತ್ತದೆ; ಧರಿಸುವ ಉಡುಪಿಗೂ ಸಂಬಂಧವಿರುತ್ತದೆ. ಪುರೋಹಿತನ ಉಡುಪಿನ ರೀತಿಯಲ್ಲಿ ಶುಭ್ರವಾಗಿ ಸ್ವಚ್ಛವಾಗಿ ರೈತನು ಧರಿಸುವ ಬಟ್ಟೆಗಳಿರಲು ಸಾಧ್ಯವಿಲ್ಲ; ಜಲಗಾರನ ಧಿರಿಸೂ ಇರಲು ಸಾಧ್ಯವಿಲ್ಲ. ವ್ಯಕ್ತಿ ಮಾಡುವ ವೃತ್ತಿಯ ಆಧಾರದ ಮೇಲೆ ಉತ್ತಮ ನೀಚ ಎಂಬ ಭಾವನೆಗಳು ಮೂಡಿದವು. ದೇವರು, ಧರ್ಮ, ಪುರೋಹಿತ್ಯ, ಯಜ್ಞಯಾಗ, ಬೋಧನೆ ಮುಂತಾದ ಬೌದ್ಧಿಕ ವಿಷಯಗಳೊಡನೆ ವ್ಯವಹರಿಸುವವನು ಉತ್ತಮನೆಂದೂ, ಶ್ರಮದಿಂದ ಕೆಲಸ ಮಾಡುವವನು ಮಧ್ಯಮನೆಂದೂ, ಮಲಮೂತ್ರಾದಿಗಳನ್ನೂ ಸ್ವಚ್ಛಗೊಳಿಸುವವನು ಅಧಮನೆಂದೂ ನಿರ್ಧರಿಸಲಾಯಿತು. ಹೀಗಾಗಿ ಉತ್ತಮನು ಸೇವಿಸುವ ಆಹಾರ ಉತ್ತಮವೆಂದೂ ಸಾತ್ವಿಕವೆಂದು ಬಗೆದು, ಶೂದ್ರರು ಪಂಚಮರು ಸೇವಿಸುವ ಆಹಾರವನ್ನು ತಾಮಸವೆಂದೂ ಕರೆದು ಆಹಾರ ಸಂಸ್ಕೃತಿಯಲ್ಲೂ ಮೇಲುಕೀಳು ಭಾವ ತರಲಾಯಿತು. ದುಡಿಯುವ ಜನರು ಮಣ್ಣಿನೊಡನೆ, ಕೆಸರಿನೊಡನೆ, ಮಲಮೂತ್ರಗಳೊಡನೆ, ಕೆಲಸಮಾಡುತ್ತಿದ್ದುದರಿಂದ ಅವರು ಮುಟ್ಟಿಸಿಕೊಳ್ಳಲು ಅಯೋಗ್ಯರಾದರು! ಕೊಳೆಯೊಡನೆ ಕೆಲಸಮಾಡುವವರಾದುದರಿಂದ ಹೊಲೆಯರಾದರು; ಅವರು ತಿನ್ನುವ ಆಹಾರವು ಕೂಡ ಹೊಲಸಾಯಿತು!

ಸತ್ಯವೆಂಬುದು ನಿತ್ಯಮೌಲ್ಯವೆಂದು ಸಾರಿದ ರಾಘವಾಂಕನು ಕೂಡ ವಿಶ್ವಾಮಿತ್ರ ಸೃಷ್ಟಿಮಾಡುವ ಕನ್ಯೆಯರನ್ನು 'ಹೊಲತಿ'ಯರೆಂದು ಕರೆದುಬಿಡುತ್ತಾನೆ! ಮಹಾಮಾನವತಾವಾದಿಯೂ ಸಮಸಮಾಜ, ಲಿಂಗಸಮಾನತೆಯನ್ನು ಎತ್ತಿಹಿಡಿದ ಹಾಗೂ ಸಾಮಾಜಿಕ ತಳವರ್ಗಕ್ಕೆ ಗೌರವ ತಂದವನೂ, ಹರಳಯ್ಯನ ಮನೆಮಗನು ತಾನೆಂದು ಹೇಳಿಕೊಂಡವನೂ ಆದ ಬಸವಣ್ಣನೂ ಕೂಡ ತನಗರಿವಿಲ್ಲದಂತೆಯೇ 'ಹೊಲಸು ತಿನ್ನುವವನೆ ಹೊಲೆಯ' ಎಂದು ನುಡಿದುಬಿಡುತ್ತಾನೆ. ಮಹಾಮನೆಯ ಭೋಜನಶಾಲೆಯಲ್ಲಿ ಬೊಮ್ಮಯ್ಯನು ತನ್ನ ಊಟಕ್ಕೆ ನೀರುಳ್ಳಿಯನ್ನು ಬಯಸಿ ಮಾಡಿಸುತ್ತಿದ್ದಾಗ, ಅದರ ವಾಸನೆಗೆ ಏವರಿಸಿ ಅಸಹ್ಯಪಟ್ಟುಕೊಳ್ಳುತ್ತಾನೆ.

ಏಕೆ ಹೀಗೆ? ಭಾರತೀಯ ಜಾತಿವ್ಯವಸ್ಥೆಯು ಸಾವಿರಾರು ವರ್ಷಗಳಿಂದ ಜಾತಿಮಾನವರ ರಕ್ತದಲ್ಲಿ, ಬಾಯರುಚಿಯಲ್ಲಿ, ನಾಸಿಕದ ಗ್ರಂಥಿಗಳಲ್ಲಿ ಅಚ್ಚೊತ್ತಿರುವ ಭಾವನಾತ್ಮಕ ಪ್ರವೃತ್ತಿಗಳು ಈ ಬಗೆಯ ವರ್ತನೆಯನ್ನು ಮೂಡಿಸಿವೆ. ಮನುಷ್ಯನು ತಿಂದು ಬದುಕುವ ಆಹಾರ ಅವರು ಬದುಕು ಮಾಡುವ ಭೌಗೋಳಿಕತೆಯ ಹವಾಮಾನ, ಅಲ್ಲಿ ಬೆಳೆಯುವ ಬೆಳೆ ಮತ್ತು ವೃತ್ತಿಯನ್ನುಅವಲಂಬಿಸಿರುತ್ತವೆ. ಒಬ್ಬನ ಆಹಾರ ಮತ್ತೊಬ್ಬನಿಗೆ ನೀಚವೂ ಆಗಬಾರದು; ಉತ್ತಮವೂ ಆಗಬಾರದು. ಜೀವಿ ಬದುಕಲು ತಿನ್ನುವ ಆಹಾರ ಎಂಥದ್ದೇ ಆದರೂ ಅದು ಅತ್ಯಂತ ಪವಿತ್ರವೂ ಶ್ರೇಷ್ಠವೂ ಆಗಿರುತ್ತದೆ. ಅದು 'ಹೊಲೆ'ಯಾಗಿರಲು ಸಾಧ್ಯವಿಲ್ಲ. ಭಾರತೀಯ ಸಮಾಜದ ರಕ್ತದಲ್ಲಿ ಬೆರೆತು ಬಂದಿರುವ ಜಾತಿಮೂಲ ಭಾವನೆಯ ಅಸಹ್ಯಕರ ಮನೋನೆಲೆಯನ್ನು ಕಿತ್ತೊಗೆಯಲು ವೈಚಾರಿಕವೂ, ವೈಜ್ಞಾನಿಕವೂ ಆದ ಶಿಕ್ಷಣಬೇಕು. ನಮ್ಮ ಶಿಕ್ಷಣ ವ್ಯವಸ್ಥೆ ಇಂದು ನೀಡುತ್ತಿರುವ ಕೇವಲ ಉದ್ಯೋಗಮುಖಿ ಶಿಕ್ಷಣದಿಂದ ಈ ಜಾಗೃತಿ ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ನಮ್ಮ ಸಾಮಾಜಿಕ ವ್ಯವಸ್ಥೆ ಅಪ್ಪ ಹಾಕಿದ ಆಲದಮರವೆಂಬ ಜಾತಿ ಬಂಧನದಲ್ಲಿ ಸಿಲುಕಿ ನರಳುತ್ತಿದೆ.

■ **ಶಿಕಾಕು**

## ಮಾತೇ ಮುತ್ತು

★ ಸರಿ ಮತ್ತು ತಪ್ಪುಗಳ ಮಧ್ಯೆ ಒಂದು ಕೂದಲಿನಷ್ಟು ಮಾತ್ರ ಅಂತರವಿರುತ್ತದೆ.

-ಉಮರ್ ಖಯ್ಯಾಂ

★ ಜೀವನ ನಮಗೆ ಏಷ್ಟೊಂದು ಕೊಟ್ಟಿದೆ ಎನ್ನುವುದರ ಬಗ್ಗೆ ಆಲೋಚಿಸಿ. ಏನನ್ನು ಕೊಟ್ಟಿಲ್ಲ ಎನ್ನುವುದರ ಬಗ್ಗೆ ಚಿಂತೆ ಮಾಡಬೇಡಿ.

-ವಿಲಿಯಂ ಬರ್ಕ್‌ಲೇ

★ ನಿಮ್ಮ ಕನಸಿನಲ್ಲಿ ನೀವು ಒಬ್ಬರೇ ಇದ್ದರೆ ಅದು ಬರೀ ಕನಸಾಗಿರುತ್ತದೆ. ಬೇರೆಯವರೂ ಇದ್ದರೆ ಅದು ನನಸಾಗುತ್ತದೆ.

-ಯೋಕೊ ಒನೊ

★ ಮನಸ್ಸನ್ನು ಶಾಂತವಾಗಿ ಇಟ್ಟುಕೊಂಡವನು ಗೆಲ್ಲುವ ಸಾಧ್ಯತೆ ಹೆಚ್ಚು.

-ನಾರ್ಮನ್ ಕಸಿನ್ಸ್

★ ನಿಮ್ಮ ಮನಸ್ಸೇ ನಿಮ್ಮನ್ನು ದುಷ್ಟ ಕೆಲಸಗಳಿಗೆ ಪ್ರೇರೇಪಿಸುತ್ತದೆ; ನಿಮ್ಮ ಗೆಳೆಯರು ಅಥವಾ ವೈರಿಗಳಲ್ಲ.

-ಗೌತಮ ಬುದ್ಧ

★ ಅಜಾತನಾದವನಿಗೆ ಜಾತಿ ಯಾವುದೆ ತಾಯಿ?

–ಎಚ್.ಎಸ್.ಶಿವಪ್ರಕಾಶ್

★ ಮೌನ ನಿಮ್ಮ ನಿಜವಾದ ಗೆಳೆಯ. ಅದು ನಿಮಗೆ ಯಾವತ್ತೂ ದ್ರೋಹ ಬಗೆಯುವುದಿಲ್ಲ.

-ಕನ್‌ಫ್ಯೂಶಿಯಸ್

★ ಜನಸಾಮಾನ್ಯನ, ಮೂಕ ಅಳಲಿನಲ್ಲಿ ಸಾಮ್ರಾಜ್ಯಗಳ ಬೀಳಿಸುವ ತಪಃಶಕ್ತಿ ಇದೆ

–ಪಿ.ಲಂಕೇಶ್

★ ಬದಲಾವಣೆ ಇಲ್ಲದೆ ಪ್ರಗತಿ ಅಸಾಧ್ಯ. ತಮ್ಮ ಮನಸ್ಸನ್ನು ಬದಲಾಯಿಸಲು ಆಗದವರು ಇನ್ನೇನನ್ನೂ ಬದಲಾಯಿಸಲಾರರು.

–ಜಾರ್ಜ್ ಬರ್ನಾರ್ಡ್ ಷಾ